ಲೇಸು...' – ಇದು ಕಥೆಯ ನಾಯಕನ ಆಯ್ಕೆ. ತಿಮ್ಮ ಆಶಾವಾದಿ, ರಮೇಶ ನಿರಾಶಾವಾದಿ. ಈ ನಾಯಕನ ಆಸೆ-ನಿರಾಶೆಗಳನ್ನು ಮೀರಿ ಸಾವಿನ ಕಡೆ ದೃಷ್ಟಿ, ರೋಗಿಯಾಗಿ ಆಸ್ಪತ್ರೆಯಲ್ಲಿ ಮಲಗಿರುವ ನಾಯಕನ ಸಂಘರ್ಷ ನಡೆದಿದೆ. ಇಲ್ಲಿಯೂ ಭೂತ-ವರ್ತಮಾನಗಳ ಮುಖಾಮುಖಿ. ಹೆಂಡತಿ ಬಂದು ಹೋಗುವ ನಾಟಕೀಯ ಪ್ರಸಂಗವೂ ನಡೆಯುತ್ತದೆ. ಕಿರಣಳೂ ಬಂದು ಸಂತೈಸುವ ಹೃದಯಸ್ಪರ್ಶಿ ಸನ್ನಿವೇಶವೂ ಇದೆ. ನಾಯಕನ ಹಾಸಿಗೆಯ ಬಳಿ ತಂದೆ, ತಾಯಿ, ತಮ್ಮ, ಗೆಳೆಯ ರವಿ, ಹೆಂಡತಿ, ಪ್ರೇಮಿ ಕಿರಣ ಎಲ್ಲರೂ ಇದ್ದಾರೆ. ಆದರೆ ಯಾರೂ ಇಲ್ಲದ ಸ್ಥಿತಿ ನಾಯಕನದು. ಕಥೆ ಎಂದರೆ ಹೀಗಿರಬೇಕು ಎನ್ನುವ ಮಾದರಿಗೆ ಈ ಕಥೆ ಸಾಕ್ಷಿಯಾಗಿದೆ.



ಕುಟುಂಬ ಸಮಾಜ ಮತ್ತು ವ್ಯಕ್ತಿಯ ಅಂತರ್‌ಸಂಬಂಧದಲ್ಲಿ ಕುಟುಂಬವೂ, ಸಮಾಜವೂ ಮುಖರಹಿತವಾದಾಗ, ತತ್ವರಹಿತವಾದಾಗ, ಮನುಷ್ಯತ್ವವನ್ನು ಕಳೆದುಕೊಂಡಾಗ ವ್ಯಕ್ತಿ ತನ್ನತನವನ್ನು ಹೇಗೆ ಉಳಿಸಿಕೊಂಡು ಬದುಕುವ ದಾರಿ ಕಂಡುಕೊಳ್ಳಬೇಕಾಗುತ್ತದೆ ಎಂಬುದನ್ನು 'ನೆಲೆ' ಕಥೆ ಸಮರ್ಥವಾಗಿ ಕಟ್ಟಿಕೊಡುತ್ತದೆ. ಈ ಕಥೆಯ ರಂಗಮ್ಮ ಎಲೆ ಮಾರಿ ಜೀವನ ಸಾಗಿಸುವಳು. ಆಕೆಯ ಹಿನ್ನೆಲೆಯೇ ಭೀಕರವಾಗಿದೆ. ಕೂಲಿ ಮಾಡಿ ಬದುಕುವ ಕುಟುಂಬದಲ್ಲಿ ರಂಗಮ್ಮ ಹುಟ್ಟಿದ ಬೆನ್ನಲ್ಲೇ ಹೆತ್ತವ್ವನನ್ನು ಕಳೆದುಕೊಂಡು, ಬದುಕಿದ್ದರೂ ತಂದೆಯ ಆರೈಕೆ ದಕ್ಕದೆ ಹೋದಾಗ, ಜಾತಿಗೇರ ಮಾಬವ್ವನಲ್ಲಿ ಬೆಳೆಯುತ್ತಾಳೆ. ಮಾಬವ್ವನ ಗಂಡ ರಜಾಕಾರರ ಜೊತೆ ಸೇರಿ ಊರೂರು ಅಲೆದು ಕೊಳ್ಳೆ ಹೊಡೆದು, ಕೊನೆಗಾಲದಲ್ಲಿ ದುರ್ಮರಣ ಕಂಡನು. ಮಾಬವ್ವ ಊರ ಗೌಡನ ಪಾಲಾದಳು. ರಂಗಮ್ಮ ಇಂಥ ಪರಿಸರದಲ್ಲಿ ಬೆಳೆದು ನಿಂತಳು. ಎಲ್ಲೋ ಇದ್ದ ತಂದೆ ಬಂದು, ನೈತಿಕ ಪ್ರಶ್ನೆ ಮುಂದಿಟ್ಟು ಮಾಬಮ್ಮನಿಂದ ಮಗಳು ರಂಗಮ್ಮನನ್ನು ಬಿಡಿಸಿಕೊಂಡು, ಮಗಳನ್ನೇ ಮಾರಿ ಬದುಕಲು ಸಂಚು ನಡೆಸುತ್ತಾನೆ. ಅದನ್ನರಿತು ರಂಗಮ್ಮ ತಂದೆಯನ್ನು ಧಿಕ್ಕರಿಸಿ ಪುನಃ ಮಾಬವ್ವನಲ್ಲಿ ಸೇರಿಕೊಳ್ಳುತ್ತಾಳೆ. ಮಾಬವ್ವನ ಗೌಡನೇ ಸಾಯಿಬಣ್ಣನಿಗೆ ರಂಗಮ್ಮನನ್ನು ಕೊಟ್ಟು ಮದುವೆ ಮಾಡಿಸುತ್ತಾನೆ. ಗಂಡನೂ ರಂಗಮ್ಮನನ್ನು ಮಾರಿ ಬದುಕಲು ನೋಡುತ್ತಾನೆ. ರಂಗಮ್ಮ ಒಂದು ಸರಕು, ಅದನ್ನು ಮಾರುವ ಹಕ್ಕು ತಮಗಿದೆ ಎನ್ನುವ ತಂದೆ, ನಂತರ ಗಂಡ. ಅದನ್ನು ಕೊಂಡು ಅನುಭವಿಸುವ ಸೀನಪ್ಪನೆಂಬ ಸಮಾಜ, ಕುಟುಂಬ, ಸಮಾಜಗಳ ಕ್ರೌರ್ಯಕ್ಕೆ ಸಿಕ್ಕರೂ ರಂಗಮ್ಮ ಗಟ್ಟಿಗಳು. ತನ್ನತನ ಉಳಿಸಿಕೊಳ್ಳಲು, ಸ್ವಾತಂತ್ರ್ಯ ಮತ್ತು ಆಯ್ಕೆಯ ಹಕ್ಕನ್ನು ಪಡೆಯಲು ಹೋರಾಟ ನಡೆಸುತ್ತಾಳೆ. ಗಂಡನೇ ರಂಗಮ್ಮನನ್ನು ಸೀನಪ್ಪನಿಗೆ ಮಾರಲು ಯತ್ನಿಸಿದಾಗ, ಅದನ್ನು ಧಿಕ್ಕರಿಸಿ, ಕಿರಾಣಿ ಅಂಗಡಿಯ ಮಾಲೀಕ ಯಂಕಯ್ಯನನ್ನು ಆಯ್ಕೆ ಮಾಡಿಕೊಂಡು ಅದನ್ನು ಘೋಷಿಸುತ್ತಾಳೆ. ಜತೆಗೆ, 'ಇವತ್ತಿಂದ ನನ್ನೋರು ಅಂಬೋರು ಯಾರೂ ಇಲ್ಲ...' ಎಂದು ಸಾರುತ್ತಾಳೆ. ರಂಗಮ್ಮನ ಈ ಆಯ್ಕೆಯ ಹಿಂದೆ ಸವೆಸಿದ ಹಾದಿ ಕಷ್ಟದ್ದಿತ್ತು. ಈ ಆಯ್ಕೆ ರಂಗಮ್ಮನನ್ನು ಬಿಡುಗಡೆ ಮಾಡುತ್ತದೆಯೇ ಎಂಬ ಪ್ರಶ್ನೆ ಹುಟ್ಟಿದರೂ, ಆಕೆ ಅದನ್ನು ನಿಭಾಯಿಸಬಲ್ಲಳು ಅಂತನ್ನಿಸುತ್ತದೆ. ಈ ಕಥೆ ಕೂಡ ರಂಗಮ್ಮನ ಪ್ರಜ್ಞೆಯಲ್ಲಿಯೇ ಮುನ್ನಡೆಯುತ್ತದೆ. ರಂಗಮ್ಮನ ಜವಾರಿ ವ್ಯಕ್ತಿತ್ವವನ್ನು ಕಥೆ ಸಮರ್ಥವಾಗಿ ಕಟ್ಟಿಕೊಡುತ್ತದೆ.

ವ್ಯಕ್ತಿಪ್ರಜ್ಞೆ ಕೇಂದ್ರಿತ, ನಿರೂಪಣೆ ಮೇಲಿನ ಕಥೆಗಳ ಜೊತೆಗೆ ಇನ್ನೂ ಕೆಲವು ಕಥೆಗಳಲ್ಲಿ ಪ್ರಜ್ಞಾಪ್ರವಾಹ